ಸಂಪಾದಕೀಯ
EDITORIAL

# ಕಲಾಪ ಫಲಪ್ರದವಾಗಲಿ

## ಗುಣಮಟ್ಟದ ಚರ್ಚೆಗೆ ನಾಂದಿ ಹಾಡಿ

ವಿಧಾನ ಪರಿಷತ್ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವ ಸಂಬಂಧ ನಡೆದ ಗಲಾಟೆಯ ಬಳಿಕ ನಡೆಯಲಿರುವ ವಿಧಾನ ಮಂಡಳ ಅಧಿವೇಶನದ ಮೇಲೆ ಎಲ್ಲರ ದೃಷ್ಟಿ ನೆಟ್ಟಿದೆ. ಇಂದಿನಿಂದ(ಗುರುವಾರ) ಆರಂಭವಾಗಿ ಫೆಬ್ರವರಿ 5ರವರೆಗೆ ಒಟ್ಟು 7 ದಿನಗಳ ಕಾಲ ಅಧಿವೇಶನ ಕಲಾಪ ನಡೆಯಲಿದೆ. ರಾಜ್ಯಪಾಲರು ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡುವ ಮೂಲಕ ಸರಕಾರದ ಸಾಧನೆ ಮತ್ತು ಕಾರ್ಯವೈಖರಿಯನ್ನು ತೆರೆದಿಡಲಿದ್ದಾರೆ. ಸಂಪುಟ ವಿಸ್ತರಣೆ ಬಳಿಕ ಖಾತೆ ಹಂಚಿಕೆಯಲ್ಲಿ ಮೂರು ಬಾರಿ ಬದಲಾವಣೆ ಮಾಡಲಾಗಿದೆ. ಕೃಷಿ ಸಂಬಂಧಿತ ಕಾಯಿದೆ ಜಾರಿ ಮತ್ತು ದೇಶಾದ್ಯಂತ ನಡೆದ ರೈತರ ಪ್ರತಿಭಟನೆಗಳು, ಮುಖ್ಯಮಂತ್ರಿ ತವರು ಜಿಲ್ಲೆಯಾದ ಶಿವಮೊಗ್ಗದಲ್ಲಿ ಜಿಲೆಟಿನ್ ಸ್ಫೋಟದ ನಂತರ ಬಯಲಾಗುತ್ತಿರುವ ಅಕ್ರಮ ಗಣಿಗಾರಿಕೆಗಳು, ಉಪಸಭಾಪತಿಯವರ ಎಳೆದಾಟ ಮತ್ತು ಆ ನಂತರದ ದಿನಗಳಲ್ಲಿ ಅವರ ಆತ್ಮಹತ್ಯೆ ಮತ್ತು ಶಾಸಕರ ನಡುವಳಿಕೆಗಳು, ಎಫ್‌ಡಿಎ ಪ್ರಶ್ನೆ ಪತ್ರಿಕೆ ಸೋರಿಕೆಯಂಥ ಅನೇಕ ವಿಷಯಗಳು ಅಧಿವೇಶನದಲ್ಲಿ ಚರ್ಚೆಗೆ ಬರುವ ಸಾಧ್ಯತೆಗಳಿವೆ. ಈ ನಡುವೆ ಪರಿಷತ್‌ನಲ್ಲಿ ಗೋ ಹತ್ಯಾ ನಿಷೇಧ ವಿಧೇಯಕ ಮಂಡಿಸಲಾಗುತ್ತದೆ. ಇದು ಸಾಕಷ್ಟು ವಾಗ್ವಾದಕ್ಕೆ ಎಡೆಮಾಡಿಕೊಡುವ ಎಲ್ಲ ಸಾಧ್ಯತೆಯೂ ಇದೆ. ರಾಜ್ಯ ಸರಕಾರಕ್ಕೆ ಸವಾಲೊಡ್ಡುವ ಈ ಎಲ್ಲ ವಿಷಯಗಳನ್ನು ಪ್ರಸ್ತಾಪಿಸಲು ಪ್ರತಿಪಕ್ಷಗಳು ಸಜ್ಜಾದಂತಿದೆ. ಆಡಳಿತಾತ್ಮಕ ವಿಷಯದಲ್ಲಿ ಸರಕಾರದ ವಿಫಲತೆ ಬಗ್ಗೆ ಆರೋಪಿಸಿ ಕಾಂಗ್ರೆಸ್ ನಿಲುವಳಿ ಸೂಚನೆ ಮಂಡಿಸುವ ನಿರೀಕ್ಷೆಯೂ ಇದೆ. ಜೆಡಿಎಸ್‌ನಿಂದಲೂ ಕಾರ್ಯತಂತ್ರ ರೂಪಿಸಲಾಗುತ್ತಿದೆ. ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ(ಎರಡನೇ ತಿದ್ದುಪಡಿ) ವಿಧೇಯಕ ಸೇರಿದಂತೆ ಸುಗ್ರೀವಾಜ್ಞೆ ಹೊರಡಿಸಲಾಗಿರುವ ಮೂರೂ ವಿಧೇಯಕಗಳನ್ನು ಈ ಬಾರಿ ಸದನದಲ್ಲಿ ಮಂಡಿಸಲಾಗುತ್ತದೆ.



ಶಾಸಕಾಂಗದ ಉನ್ನತ ಸ್ಥಾನವಾಗಿರುವ ವಿಧಾನಸಭೆಯಲ್ಲಿ ಫಲಪ್ರದ ಚರ್ಚೆಯನ್ನು ಈ ನಾಡಿನ ಜನ ನಿರೀಕ್ಷಿಸುತ್ತಾರೆ. ತಮ್ಮ ರಾಜಕೀಯ ಅನುಕೂಲಸಿಂಧುತ್ವಕ್ಕಾಗಿ ಆಡಳಿತ ಮತ್ತು ಪ್ರತಿಪಕ್ಷಗಳು ಅವಕಾಶ ಮಾಡಿಕೊಡಬಾರದು. ಪ್ರಜಾಪ್ರಭುತ್ವ ನಿಂತಿರುವುದೇ ಅಭಿಪ್ರಾಯ, ಭಿನ್ನಾಭಿಪ್ರಾಯ ಮತ್ತು ಚರ್ಚೆ ತತ್ವಗಳ ಮೇಲೆ. ಹಾಗಾಗಿ, ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಅತ್ಯಮೂಲ್ಯವಾದ ಸಮಯವನ್ನು ಒಂಚೂರು ವ್ಯರ್ಥವಾಗದಂತೆ ಬಳಸಿಕೊಳ್ಳಬೇಕಾದ ಹೊಣೆಗಾರಿಕೆ ಪ್ರತಿಯೊಬ್ಬ ಸದಸ್ಯರ ಮೇಲೂ ಇದೆ.

ಕಾರಣಾಂತರಗಳಿಂದಾಗಿ ಕಳೆದ ಎರಡು ವರ್ಷದಲ್ಲಿ ಸರಕಾರ ಇನ್ನೂ ಸಮಾಜದ ತಳಮಟ್ಟದ ಜನರಿಗೆ ತಲುಪಲು ಸಾಧ್ಯವಾಗಿಲ್ಲ, ಅದಕ್ಕೆ ಅದರದ್ದೇ ಕಾರಣಗಳಿವೆ. ಆಡಳಿತ ವ್ಯವಸ್ಥೆ ಜಿಡ್ಡುಗಟ್ಟಿದ್ದು ಮಾತ್ರವಲ್ಲದೇ ನೈಸರ್ಗಿಕ ಕಾರಣಗಳನ್ನು ನೀಡಬಹುದು. ಇದರ ಹೊರತಾಗಿಯೂ ಸರಕಾರವೊಂದು ಸಕ್ರಿಯವಾಗಿ ಕೆಲಸ ಮಾಡಲುಬೇಕಾದ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು. ಪ್ರತಿಪಕ್ಷಗಳು ಸರಕಾರ ಲೋಪಗಳನ್ನು ಎತ್ತಿ ಹಿಡಿದು ಅಂತಿಮವಾಗಿ ಜನಕಲ್ಯಾಣಕ್ಕೆ ಸಹಕರಿಸಬೇಕು. ಇದಕ್ಕೆಲ್ಲ ವಿಧಾನ ಮಂಡಳದ ಅಧಿವೇಶನವು ಅತ್ಯುತ್ತಮ ವೇದಿಕೆಯಾಗಿದೆ. ಇಲ್ಲಿ ಕೇವಲ ಕಾಯಿದೆ, ಕಾನೂನಗಳೇ ಮಾತ್ರವೇ ರೂಪಿತವಾಗುವುದಿಲ್ಲ, ಇಲ್ಲಿನ ನಡೆ, ನುಡಿ ಎಲ್ಲವೂ ಅನುಕರಣೀಯವಾಗಿರುತ್ತದೆ.

ಹಾಗೇ ನೋಡಿದರೆ, ಕರ್ನಾಟಕದ ವಿಧಾನ ಮಂಡಳ ಅಧಿವೇಶನಕ್ಕೆ ಘನವಾದ ಇತಿಹಾಸವಿದೆ. ಸಂಸದೀಯ ವ್ಯವಹಾರಗಳಲ್ಲಿ ಇಡೀ ದೇಶಕ್ಕೆ ಮೇಲ್ಪಂಕ್ತಿ ಹಾಕಿಕೊಟ್ಟ ಹೆಚ್ಚುಗಾರಿಕೆ ನಮ್ಮದು. ಆದರೆ, ಇತ್ತೀಚಿನ ಕೆಲವು ವರ್ಷಗಳಿಂದ ಅಧಿವೇಶನದ ಘನ ಉದ್ದೇಶ ಈಡೇರುತ್ತಿಲ್ಲ. ಕೇವಲ ಕಾಟಾಚಾರಕ್ಕೆ ಎಂಬಂತೆ ಕಲಾಪಗಳು ನಡೆಯುತ್ತಿವೆ. ಇಲ್ಲವೇ ಆಡಳಿತ ಮತ್ತು ಪ್ರತಿಪಕ್ಷಗಳ ಅಹಮ್ಮಿಗೆ ಅಧಿವೇಶನವೇ ಬಲಿಯಾಗುತ್ತಿದೆ. ಹಾಗಾಗಿ, ಇಂದಿನಿಂದ ನಡೆಯಲಿರುವ ಈ ಅಧಿವೇಶನ ಇಂಥ ಯಾವುದೇ ಅಪಸವ್ಯಗಳಿಗೆ ಆಸ್ಪದ ಮಾಡಿಕೊಡಬಾರದು. ಎಲ್ಲ ಸದಸ್ಯರೂ ಅಧಿವೇಶನದ ಯಶಸ್ಸಿಗೆ ಶ್ರಮಿಸಬೇಕು. ಇದೊಂದು ಅತ್ಯಂತ ಫಲಪ್ರದ ಅಧಿವೇಶನವಾಗಿ ದಾಖಲಾಗಬೇಕು.